# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.470/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16.1.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

ವಿಷಯ: ದೇವನಹಳ್ಳಿ ತಾಲ್ಲೂಕು, ಇಂದ್ರಸನಹಳ್ಳಿ ಗ್ರಾಮದ 10 ಜನರಿಗೆ (ಕಂಡಿಕೆ ಸಂ.7ರಲ್ಲಿ ನಮೂದಿಸಿರುವ ವ್ಯಕ್ತಿಗಳು) ಅಕ್ರಮವಾಗಿ ನಿವೇಶನ ಮಂಜೂರು ಮಾಡಿದ್ದನ್ನು ರದ್ದುಗೊಳಿಸಿ ಅವರಿಂದ ಆ ನಿವೇಶನಗಳನ್ನು ತೆರವುಗೊಳಿಸಿ ಪುನ: ಪಂಚಾಯತಿ ವ್ಯಾಪ್ತಿಗೆ ಸ್ವಾಧೀನ ಪಡೆದುಕೊಳ್ಳುವ ಬಗ್ಗೆ.

*******

ಶ್ರೀ.ಗೋಪೀನಾಥ್, ಪಿ.ಸಿ. ಬಿನ್ ಚಿಕ್ಕಮುನಿಯಪ್ಪ, ಹೆಗ್ಗನಹಳ್ಳಿ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ರಾಜಣ್ಣ, ಹಿಂದಿನ ಪಿ.ಡಿ.ಒ. ಜಾಲಿಗೆ ಗ್ರಾಮಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಇತರ ಇಬ್ಬರು ಅಧಿಕಾರಿಗಳು/ನೌಕರರು (ಇನ್ನು ಮುಂದೆ ಕ್ರಮವಾಗಿ 1ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಇಂದ್ರಸನಹಳ್ಳಿ ಗ್ರಾಮದ ವಾಸಿಗಳಾದ ಶ್ರೀ.ಪೂಜಪ್ಪ, ನಾಗರಾಜು, ಮುನಿಲಕ್ಷ್ಮಮ್ಮ, ಲಕ್ಷ್ಮಮ್ಮ, ಗೌರಮ್ಮ, ನಂಜಪ್ಪ, ಇವರಿಗೆ ಎದುರುದಾರರು ಕಾನೂನು ಬಾಹಿರವಾಗಿ ಸರ್ಕಾರಿ ಗ್ರಾಮ ಠಾಣಾದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. ಅಲ್ಲದೆ ಪೂಜಪ್ಪನವರ ಒಂದೇ ಕುಟುಂಬಕ್ಕೆ 8 ನಿವೇಶನಗಳನ್ನು ಅಕ್ರಮವಾಗಿ ನೀಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಈ ಅಕ್ರಮವಾಗಿ ಹಂಚಿಕೆ ಮಾಡಿರುವ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿಯ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ. ಪಂಚಾಯ್ತಿಯಲ್ಲಿ ಗ್ರಾಮಠಾಣಾಕ್ಕೆ ಸೇರಿದ ಯಾವುದೇ ಜಾಗವನ್ನು ನಿವೇಶನಗಳಾಗಿ ವಿಂಗಡಿಸಿ ಫಲಾನುಭವಿಗಳಿಗೆ ಹಂಚಿರುವುದಿಲ್ಲ. ಆದರೆ ಮಂಡಲ ಪಂಚಾಯ್ತಿ ಅಸ್ತಿತ್ವಕ್ಕೆ ಬಂದಾಗಿನಿಂದಲು ವಾರಸುದಾರರು ಅನುಭವದಲ್ಲಿದ್ದು

ಪಂಚಾಯ್ತಿಯಲ್ಲಿ ಖಾತೆ ದಾಖಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ: 1.7.2012ರಿಂದ 14.2014ರವರೆಗೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು ತನ್ನ ಅವಧಿಯಲ್ಲಿ ದೂರಿನಲ್ಲಿ ಹೆಸರಿಸಿರುವ ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಮಾಡಿರುವುದಿಲ್ಲ ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿ ಹೆಸರಿಸಿರುವ ಖಾತೆಗಳ ಬಗ್ಗೆ ಎದುರುದಾರರ ನಂ: 1 ರವರ ಸೇವಾ ಅವಧಿಯಲ್ಲಿ ನಡೆದಿರುತ್ತದೆ, ತಾನು ಮೇಲಾಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಿಸುವುದು ತನ್ನ ಕರ್ತವ್ಯವಾಗಿದ್ದು ಆದ್ದರಿಂದ ತಾನು ಯಾವುದೇ ಅಕ್ರಮ ಎಸಗಿರುವುದಿಲ್ಲವೆಂದು ತಿಳಿಸಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿ ಖಾತ ನಂ: 64 ಆಸ್ತಿಯಲ್ಲಿ 9, 9/1, 9/2 ಈ ಮೂರು ನಿವೇಶನಗಳನ್ನು ನಾಗರಾಜ್ ತಂದೆ ನಂಜುಂಡಪ್ಪ ಆತನ ಹೆಂಡತಿ ಲಕ್ಷ್ಮಮ್ಮ ರವರಿಗೆ ಖಾತೆ ಮಾಡಿಕೊಟ್ಟಿರುತ್ತಾರೆ. ಈ ಮೊದಲು ಲಕ್ಷ್ಮಮ್ಮನವರಿಗೆ ಮನೆ ಮಂಜೂರಿಯಾಗಿದ್ದು ಅದನ್ನು ಕಟ್ಟಿಕೊಂಡು ಅಲ್ಲಿಯೇ ವಾಸವಾಗಿರುತ್ತಾರೆ. ಅದೇ ರೀತಿ ಆಸ್ತಿ ನಂ: 62/10ರಲ್ಲಿ ಬಂಜರು ನಂ; 81ಅನ್ನು ಮುನಿಲಕ್ಷ್ಮಮ್ಮ ಇವರ ಹೆಸರಿಗೆ ಮಾಡಿರುತ್ತಾರೆ. ಅದೇ ರೀತಿ ಪೂಜಪ್ಪ ರವರಿಗೆ ಬಂಜರು ನಂ: 81 ಆಸ್ತಿ ಸಂ: 62/11 ವಿಸ್ತೀರ್ಣ 80*75 ಅಡಿ ವಿಸ್ತೀರ್ಣದ ನಿವೇಶನವನ್ನು ಹಂಚಿಕೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳು ತಮ್ಮ ವರದಿ ಸಲ್ಲಿಸಿದ್ದು ಅದರಲ್ಲಿ ಈ ಕೆಳಗಿನಂತೆ ಒಂದೇ ಕುಟುಂಬದ 8 ಜನರಿಗೆ ನಿವೇಶನ ಹಂಚಿಕೆಯಾಗಿದೆ ಅಂತ ವರದಿ ಸಲ್ಲಿಸಿದ್ದಾರೆ.

| ಕ್ರ.ಸಂ | ಖಾತೆದಾರರ ಹೆಸರು | ಖಾತೆ ಸಂ: | ಷರ |
|---|---|---|---|
| 1 | ಪೂಜಪ್ಪ ತಂದೆ ಮುನಿನಂಜಪ್ಪ | 62/11 | 2000–01ರಲ್ಲಿ ದಾಖಲಾಗಿರುತ್ತದೆ |
| 2 | ಮುನಿಲಕ್ಷ್ಮಮ್ಮ ಗಂಡ ಮಂಜುನಾಥ | 62/10 | 2005–06ನೇ ಸಾಲಿನಲ್ಲಿ ದಾಖಲಾಗಿರುತ್ತದೆ. |
| 3 | ಚಂದ್ರಮ್ಮ ಗಂಡ ಪೂಜಪ್ಪ | 32 | ದೊಡ್ಡಮುನಿಯಪ್ಪನ ಹೆಸರಿನಲ್ಲಿ ಖಾತೆ ಇದ್ದು |

| | | | |
|---|---|---|---|
| | | | 2006–07ರಲ್ಲಿ ಕ್ರಯ ಮೂಲಕ ಖಾತೆ ಬದಲಾಯಿಸಿರುತ್ತಾರೆ. |
| 4 | ನಂಜಪ್ಪ ತಂದೆ ಮುನಿನಂಜಪ್ಪ | 106 | 2011–12ರಲ್ಲಿ ಪ್ರಥಮವಾಗಿ ಡಿಮ್ಯಾಂಡ್ ವಹಿಯಲ್ಲಿ ನಮೂದಿಸಲಾಗಿದೆ. |
| 5 | ಮುನಿಚೌಡಪ್ಪ ತಂದೆ ಮುನಿನಂಜಪ್ಪ | 49/1/1 | 1999–2000 ಪ್ರಥಮವಾಗಿ ದಾಖಲಾಗಿರುತ್ತದೆ. |
| 6 | ಕೆಂಪಮ್ಮ ಗಂಡ ಮುನಿನಂಜಪ್ಪ | 44/1 | 2000–2001ರಲ್ಲಿ ಪ್ರಥಮವಾಗಿ ದಾಖಲೆಯಾಗಿರುತ್ತದೆ. |
| 7 | ಗೌರಮ್ಮ ಗಂಡ ನಂಜಪ್ಪ | 44/1/2 | 2000–2001ರಲ್ಲಿ ಪ್ರಥಮವಾಗಿ ದಾಖಲೆಯಾಗಿರುತ್ತದೆ. |
| 8 | ನಾಗರಾಜ್ ತಂದೆ ನಂಜುಂಡಪ್ಪ | 64/9 | 1993–94ರಲ್ಲಿ ದಾಖಲೆಯಾಗಿರುತ್ತದೆ. |
| 9 | ಲಕ್ಷ್ಮಮ್ಮ ಗಂಡ ನಾಗರಾಜು | 64/9/1 | 2006–07ರ ಡಿಮ್ಯಾಂಡ್ ವಹಿಯಲ್ಲಿ ನಮೂದಿಸಲಾಗಿದೆ. |
| 10 | ಲಕ್ಷ್ಮಮ್ಮ ಗಂಡ ನಾಗರಾಜು | 64/9/2 | ಪ್ರಥಮವಾಗಿ ನಾಗರಾಜು ಹೆಸರಿನಲ್ಲಿ ದಾಖಲೆಯಾಗಿದ್ದು ಆ ನಂತರ ಇದು ಅನಧಿಕೃತವಾಗಿರುತ್ತದೆ ಎಂಬುದು 2013–14ರಲ್ಲಿ ದೃಢೀಕರಿಸಲಾಗಿದೆ. |

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಈ ಪ್ರಕರಣದಲ್ಲಿ ಸರ್ಕಾರಿ ಗ್ರಾಮ ಠಾಣಾ ಜಾಗೆಯಲ್ಲಿ ಅಕ್ರಮವಾಗಿ 10 ಜನರಿಗೆ ನಿವೇಶನ ಮಂಜೂರು ಮಾಡಿದ್ದಾರೆಂದು ಕಂಡುಬಂದಿರುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಗ್ರಾಮ ಠಾಣೆಯ ಜಾಗೆಯನ್ನು ಮೇಲ್ಕಂಡ 10 ಜನ ವ್ಯಕ್ತಿಗಳಿಂದ ತೆರವುಗೊಳಿಸಿ ಪಂಚಾಯ್ತಿ ವ್ಯಾಪ್ತಿಗೆ ಪಡೆಯುವಂತೆ ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.